**ಇರಾನ್‌ನಿಂದ ಭಾರತೀಯ ಪ್ರಜೆಗಳನ್ನು ಸ್ಥಳಾಂತರಿಸಲು ಆಪರೇಷನ್ ಸಿಂಧು ಆರಂಭಿಸಿದ ಭಾರತ (ಜೂನ್ 18, 2025)**

ಜೂನ್ 18, 2025

ಇರಾನ್ ಮತ್ತು ಇಸ್ರೇಲ್ ನಡುವೆ ನಡೆಯುತ್ತಿರುವ ಸಂಘರ್ಷದ ಪರಿಣಾಮವಾಗಿ ಕ್ಷೀಣಿಸುತ್ತಿರುವ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಕಳೆದ ಕೆಲವು ದಿನಗಳಿಂದ ಭಾರತ ಸರ್ಕಾರವು ಇರಾನ್‌ನಲ್ಲಿರುವ ಭಾರತೀಯ ನಾಗರಿಕರ ಸುರಕ್ಷತೆ ಮತ್ತು ಭದ್ರತೆಗಾಗಿ ವಿವಿಧ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

2. ಮೊದಲ ಹಂತವಾಗಿ, ಭಾರತೀಯ ರಾಯಭಾರ ಕಚೇರಿಯು ಉತ್ತರ ಇರಾನ್‌ನಿಂದ 110 ಭಾರತೀಯ ವಿದ್ಯಾರ್ಥಿಗಳನ್ನು ಸ್ಥಳಾಂತರಿಸಿದೆ, 2025 ರ ಜೂನ್ 17 ರಂದು ಅರ್ಮೇನಿಯಾಕ್ಕೆ ಸುರಕ್ಷಿತವಾಗಿ ದಾಟಲು ಅವರಿಗೆ ಸಹಾಯ ಮಾಡಿದೆ. ಇರಾನ್ ಮತ್ತು ಅರ್ಮೇನಿಯಾದಲ್ಲಿರುವ ನಮ್ಮ ಮಿಷನ್‌ಗಳ ಮೇಲ್ವಿಚಾರಣೆಯಲ್ಲಿ ವಿದ್ಯಾರ್ಥಿಗಳು ಅರ್ಮೇನಿಯಾದ ರಾಜಧಾನಿ ಯೆರೆವಾನ್‌ಗೆ ರಸ್ತೆ ಮೂಲಕ ಪ್ರಯಾಣಿಸಿದರು. ಈ ವಿದ್ಯಾರ್ಥಿಗಳು 2025 ರ ಜೂನ್ 18 ರಂದು 2:55 ಗಂಟೆಗೆ ವಿಶೇಷ ವಿಮಾನದಲ್ಲಿ ಯೆರೆವಾನ್‌ನಿಂದ ಹೊರಟರು ಮತ್ತು ಆಪರೇಷನ್ ಸಿಂಧುವಿನ ಆರಂಭಿಕ ಹಂತಗಳ ಭಾಗವಾಗಿ 2025 ರ ಜೂನ್ 19 ರ ಬೆಳಗಿನ ಜಾವದಲ್ಲಿ ನವದೆಹಲಿಗೆ ಬರುತ್ತಾರೆ.

3. ಸ್ಥಳಾಂತರ ಪ್ರಕ್ರಿಯೆಯನ್ನು ಸುಗಮಗೊಳಿಸಿದ್ದಕ್ಕಾಗಿ ಭಾರತ ಸರ್ಕಾರವು ಇರಾನ್ ಮತ್ತು ಅರ್ಮೇನಿಯಾ ಸರ್ಕಾರಗಳಿಗೆ ಕೃತಜ್ಞವಾಗಿದೆ.

4. ವಿದೇಶದಲ್ಲಿರುವ ಭಾರತೀಯ ಪ್ರಜೆಗಳ ಸುರಕ್ಷತೆ ಮತ್ತು ಭದ್ರತೆಗೆ ಭಾರತವು ಹೆಚ್ಚು ಆದ್ಯತೆಯನ್ನು ನೀಡುತ್ತದೆ. ಚಾಲ್ತಿಯಲ್ಲಿರುವ ಕಾರ್ಯಾಚರಣೆಯ ಭಾಗವಾಗಿ, ಇರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಹೆಚ್ಚಿನ ಸಂಖ್ಯೆಯ ಭಾರತೀಯ ಪ್ರಜೆಗಳಿಗೆ ಹೆಚ್ಚು ಅಪಾಯಕಾರಿ ಪ್ರದೇಶಗಳಿಂದ ದೇಶದೊಳಗಿನ ತುಲನಾತ್ಮಕವಾಗಿ ಸುರಕ್ಷಿತ ಪ್ರದೇಶಗಳಿಗೆ ತೆರಳಲು ಹಾಗೂ ಅಲ್ಲಿಂದ ಲಭ್ಯವಿರುವ ಮತ್ತು ಕಾರ್ಯಸಾಧು ಆಯ್ಕೆಗಳನ್ನು ಬಳಸಿಕೊಂಡು ಅವರನ್ನು ಸ್ಥಳಾಂತರಿಸಲು ಸಹಾಯ ಮಾಡುತ್ತಿದೆ.

5. ಇರಾನ್‌ನಲ್ಲಿರುವ ಭಾರತೀಯ ಪ್ರಜೆಗಳು ತುರ್ತು ಸಹಾಯವಾಣಿ ಮೂಲಕ ಟೆಹ್ರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯೊಂದಿಗೆ ಮತ್ತು ನವದೆಹಲಿಯಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಸ್ಥಾಪಿಸಿದ 24x7 ನಿಯಂತ್ರಣ ಕೊಠಡಿಯೊಂದಿಗೆ ಸಂಪರ್ಕದಲ್ಲಿರಲು ಸಲಹೆ ನೀಡಲಾಗಿದೆ.

6. ಟೆಹ್ರಾನ್‌ನಲ್ಲಿನ ಭಾರತೀಯ ರಾಯಭಾರ ಕಚೇರಿಯ ತುರ್ತು ಸಹಾಯವಾಣಿ ನಂಬರ್‌ಗಳು:

i. ಕರೆಗಾಗಿ ಮಾತ್ರ: +98 9128109115, +98 9128109109

ii. ವಾಟ್ಸಾಪ್‌ಗಾಗಿ: +98 901044557, +98 9015993320, +91 8086871709

iii. ಬಂದರ್ ಅಬ್ಬಾಸ್: +98 9177699036

iv. ಝುಹೆದಾನ್: +98 9396356649

v. ಇಮೇಲ್- cons.tehran@mea.gov.in

ನವದೆಹಲಿಯಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಸ್ಥಾಪಿಸಿದ 24X7 ಕಂಟ್ರೋಲ್ ರೂಮ್‌ನ ಸಹಾಯವಾಣಿ ನಂಬರ್‌ಗಳು:

800118797 (ಟೋಲ್ ಫ್ರೀ), + 91-11-23012113, + 91-11-23014104, + 91-11-23017905

ವಾಟ್ಸಾಪ್: +91-9968291988; ಇಮೇಲ್- situationroom@mea.gov.in

ನವ ದೆಹಲಿ

ಜೂನ್ 18, 2025